ವಿವಿಧ ಸುದ್ದಿ ಚಾನೆಲ್‌ಗಳನ್ನು ಬದಲಾಯಿಸುತ್ತಿದ್ದೆ. ಅವು ನಿರಂತರವಾಗಿ ಇತ್ತೀಚಿನ ಬ್ರೇಕಿಂಗ್ ನ್ಯೂಸ್ ಅನ್ನು ಪ್ರದರ್ಶಿಸುತ್ತಿದ್ದವು:

ಹಿಂದಿನ ರಾತ್ರಿ, ಶಂಕರ್ ಪಾಂಡೆ ನೇತೃತ್ವದ ನಕ್ಸಲೈಟ್ ಗುಂಪು ಒಬ್ಬ ಮಂತ್ರಿ ಸೇರಿದಂತೆ ರಾಜಕೀಯ ಪಕ್ಷದ 25 ನಾಯಕರ ಮೇಲೆ ದಾಳಿ ನಡೆಸಿ ಹತ್ಯಾಕಾಂಡ ನಡೆಸಿದೆ. ಛತ್ತೀಸ್‌ಗಢ ರಾಜ್ಯವು ಅವನ ತಲೆಗೆ ರೂ. 50 ಲಕ್ಷ ಬಹುಮಾನ ಘೋಷಿಸಿದೆ.

ಚಾನೆಲ್‌ಗಳು ನಕ್ಸಲೈಟ್‌ಗಳ ಕೆಲವು ಹಳೆಯ ಫೋಟೋಗಳು ಮತ್ತು ಕ್ಲಿಪ್ಪಿಂಗ್‌ಗಳನ್ನು ಪ್ರಸಾರ ಮಾಡುತ್ತಿವೆ. ನಾನೂ ಒಬ್ಬ ಟಿವಿ ಆ್ಯಂಕರ್ ಆಗಿರುವುದರಿಂದ, ಅವುಗಳಲ್ಲಿ ಯಾವ ಕ್ಲಿಪ್ಪಿಂಗೂ, ದಟ್ಟ ಅರಣ್ಯಗಳಲ್ಲಿ ಅಡಗಿಕೊಂಡು ಕಾರ್ಯ ನಿರ್ವಹಿಸುವ ಶಂಕರ್ ಪಾಂಡೆಗೆ ಸಂಬಂಧಿಸಿದವುಗಳಲ್ಲವೆಂದು ಗಮನಿಸುತ್ತೇನೆ. ಬೆಳಗ್ಗಿನಿಂದಲೇ ನನ್ನ ಚಾನೆಲ್ TV24 ಈ ಸುದ್ದಿಯನ್ನು ಏಕೆ ಪ್ರಸಾರ ಮಾಡುತ್ತಿಲ್ಲ ಎಂದು ಕೇಳುತ್ತಾ ಇತರ ಚಾನೆಲ್‌ಗಳ ಆ್ಯಂಕರ್‌ಗಳಿಂದ ನನಗೆ ಕೆಲವು ಕುತೂಹಲದ ಕರೆಗಳು ಬಂದಿವೆ. ನಮ್ಮ ಪ್ರಧಾನ ಸಂಪಾದಕ ಸಂದೀಪ್ ತಿವಾರಿ ನಕ್ಸಲೈಟ್ ಸಹಾನುಭೂತಿಗಾರನೆಂದು ಪ್ರಸಿದ್ಧ. ಅದು ಕಾರಣವಾಗಿರಬಹುದೇ ಎಂದು ನಾನು ಇನ್ನೂ ಯೋಚಿಸುತ್ತಿರುವಾಗಲೇ ನನ್ನ ಮೇಜಿನ ಮೇಲಿನ ಇಂಟರ್‌ಕಾಂ 'Boss' ಎಂಬ ಸೂಚನೆ ಜಿನುಗಿಸಿತು.

ನಾನು ಅವರ ಕೋಣೆಗೆ ಓಡಿದೆ.

'ಜ್ಯೋತ್ಸ್ನಾ, ಶಂಕರ್ ಪಾಂಡೆ ಅವರೊಂದಿಗೆ ಸಂದರ್ಶನ ಪ್ರಸಾರ ಮಾಡಲು ನಿನಗೆ ಒಂದು ಗುಪ್ತಮಿಷನ್ ಒಪ್ಪಿಸುತ್ತಿದ್ದೇನೆ' ಎಂದು ತಿವಾರಿ ಹೇಳುತ್ತಾರೆ. ನನಗೆ ಉತ್ಸಾಹವಾಗುತ್ತದೆ, ಅದೇ ಕ್ಷಣದಲ್ಲಿ ನನ್ನ ಕಾಲುಗಳು ನಡುಗತೊಡಗುತ್ತವೆ.

ಅವರು ಒಂದು ಪೆನ್‌ಡ್ರೈವ್ ನನ್ನ ಕೈಗೆ ಕೊಟ್ಟು, 'ಫೈಲ್‌ಗಳನ್ನು ಅಧ್ಯಯನ ಮಾಡಿದ ನಂತರ ಅಳಿಸಿ ಹಾಕು ಮತ್ತು ಕ್ಯಾಮೆರಾಮ್ಯಾನ್ ನಾಗ್ವಾಲ್ ನಿನ್ನ ಜೊತೆ ಬರುತ್ತಾನೆ' ಎಂದು ಸೂಚಿಸಿದರು.

ಸಂದೇಹಪಟ್ಟು ನಾನು ನನ್ನ ಚಿಂತೆ ಹೇಳಿಕೊಂಡೆ, 'ಸರ್, ನಾಗ್ವಾಲ್ ಹೊಸಬನು, ಕೇವಲ ಒಂದು ತಿಂಗಳ ಅನುಭವ'.

ಅವರು, 'ಜ್ಯೋತ್ಸ್ನಾ, ನನಗೆ ಒಂದು ಕಾರಣ ಇದೆ. ಅವನು ನಿನ್ನ ಮಿಷನ್ ಪ್ರದೇಶವಾದ ಕವರ್ಧಾ ಭಾಗದ ಆದಿವಾಸಿ. ಆ ಭೂಪ್ರದೇಶ ಅವನಿಗೆ ಚೆನ್ನಾಗಿ ಗೊತ್ತಿದೆ. ಅಗತ್ಯವಾದರೆ ಅದು ಸಹಾಯವಾಗುತ್ತದೆ'.

ಮತ್ತೆ ನನ್ನ ಮೇಜಿಗೆ ಮರಳಿ, ಪೆನ್‌ಡ್ರೈವ್‌ನಲ್ಲಿರುವ ಫೋಟೋಗಳು, ವೀಡಿಯೊಗಳು, ನಕ್ಷೆಗಳು, ಮಾರ್ಗಗಳು, ಸೂಚನೆ ಇತ್ಯಾದಿಗಳನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದೆ. ಸಮಯ ತುಂಬಾ ಕಡಿಮೆ ಎಂಬುದು ನನಗೆ ಅರಿವಾಯಿತು. ಮಿಷನ್ ಮರುದಿನ ಬೆಳಗಿನ ಜಾವವೇ ಆರಂಭವಾಗಬೇಕಿತ್ತು.

ನಾಗ್ವಾಲ್ ಬಗ್ಗೆ ನನಗೆ ಇನ್ನೂ ಸಂದೇಹವೇ. ನಾನು ಅವನ ಕ್ಯುಬಿಕಲ್‌ಗೆ ಧಾವಿಸಿದಾಗ, ಅವನು ಕುರ್ಚಿಯಿಂದ ಎದ್ದು ನಿಂತ. ನಾನು ಕೈ ಬೀಸಿ ಕುಳಿತು ಕೊಳ್ಳುವಂತೆ ಸೂಚಿಸಿದೆ. ಅವನು ಇನ್ನೂ ಯುವಕ, ದಪ್ಪ ಕಪ್ಪು ಗಡ್ಡವನ್ನು ಇಟ್ಟುಕೊಂಡಿದ್ದಾನೆ. ನಾನು ಅವನ ಕಣ್ಣುಗಳನ್ನು ಆಳವಾಗಿ ಪರಿಶೀಲಿಸಿದೆ. ಅವನು ಸೌಮ್ಯ ಸ್ವಭಾವದವನಂತೆ ಕಾಣುತ್ತಾನೆ. ಅವನ ಪಕ್ಕದ ಮೇಜಿನ ಮೇಲೆ ಇಡಲಾಗಿದ್ದ ಒಂದು ವಿಗ್ರಹ ನನ್ನ ಕುತೂಹಲ ಕೆರಳಿಸಿತು. ಸರ್ಪದಿಂದ ವೃತ್ತಾಕಾರವಾಗಿ ಸುತ್ತಲ್ಪಟ್ಟ ಶಿವಲಿಂಗ. ಅವನು ಬಹಳ ಧಾರ್ಮಿಕ ವ್ಯಕ್ತಿಯಾಗಿರಬೇಕು ಎಂದು ನಾನು ಊಹಿಸಿದೆ.

'ಬಾಸ್ ನಿನಗೆ ಅಸೈನ್‌ಮೆಂಟ್ ಬಗ್ಗೆ ಹೇಳಿದ್ದಾರಾ?' ಎಂದು ಕೇಳಿದೆ. ಅವನು ತಲೆಯಾಡಿಸಿದ. ನಾನು ಮಿಷನ್ ಬಗ್ಗೆ ಅವನಿಗೆ ಕ್ಷಿಪ್ರವಾಗಿ ವಿವರಿಸಿದೆ.

ಮರುದಿನ ನಮ್ಮ ಯೋಜನೆಯಂತೆ ಬೆಳಿಗ್ಗೆ ಸುಮಾರು 6 ಗಂಟೆಗೆ ನಾನು ಶಾಸ್ತ್ರಿ ಬಜಾರ್‌ಗೆ ತಲುಪಿ, ಮೀನು ಖರೀದಿಸುವಂತೆ ನಟಿಸಿದೆ. ಕೆಲವೇ ಕ್ಷಣಗಳಲ್ಲಿ, ಅಂಗಡಿ ಮಾಲೀಕನೊಂದಿಗೆ ಮೀನು ಬೆಲೆ ಬಗ್ಗೆ ಮಾತುಕತೆ ನಡೆಸುತ್ತಿರುವ ಒಬ್ಬ ವ್ಯಕ್ತಿಯನ್ನು ನೋಡಿದೆ. ಅವನು ನನ್ನ ಕಡೆ ತಿರುಗಿ ತನ್ನ